ಆ) 1000 ಮೆಗಾವ್ಯಾಟ್. ಅಂದಾಜು ಪಟ್ಟಿ ಇನ್ನೂ ತಯಾರಿಸಿಲ್ಲ.

ಇ) ಗರಿಷ್ಠ ಸಾಮರ್ಥ್ಯ ಇನ್ನೂ ಅಂತಿಮಗೊಳಿಸಿಲ್ಲ ಹಾಗೂ ಸ್ವಾಧೀನಪಡಿಸಿಕೊಳ್ಳಬೇಕಾದ ಭೂ ವಿಸ್ತೀರ್ಣ ಇನ್ನೂ ನಿರ್ಧರಿಸಬೇಕಾಗಿರುತ್ತದೆ. ವಿದ್ಯುತ್ ಯೋಜನೆಯ ನಿಖರ ಸ್ಥಳ ಇನ್ನೂ ಅಂತಿಮಗೊಳಿಸಬೇಕಾಗಿದೆ.

ಈ) ಪರಿಸರದ ಮೇಲೆ ಈ ಉಷ್ಣ ವಿದ್ಯುತ್ ಸ್ಥಾವರದಿಂದ ಆಗುವ ಪರಿಣಾಮವನ್ನು ಪರಿಸರ ಪರಿಮಾಣ ಅಧ್ಯಯನ (EIA) ಮಾಡಿದನಂತರ ತಿಳಿಯುತ್ತದೆ ಹಾಗೂ ಇದಕ್ಕನುಗುಣವಾಗಿ ದುಷ್ಪರಿಣಾಮ ತಡೆಯಲು ಕ್ರಮಗಳನ್ನು ಕೈಗೊಳ್ಳಲಾಗುವುದು.

**463 (969) ಶ್ರೀ ಶಿವರಾಮು ಬಿ. (ಗಂಡಸಿ) :–** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಾಸನ ಜಿಲ್ಲಾ ಕೇಂದ್ರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಎಸ್.ಎಂ.ಕೃಷ್ಣ ಬಡಾವಣೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯ ಪ್ರದೇಶವೆಷ್ಟು;

2) ಈ ಯೋಜನೆಯ ಸ್ವಾಧೀನ ಮತ್ತು ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಹಣವೆಷ್ಟು;

3) ಈ ಯೋಜನೆ ಯಾವ ಹಂತದಲ್ಲಿದೆ;

4) ಯೋಜನೆಯ ಪ್ರಾರಂಭಕ್ಕೆ ಮೊದಲು ಯೋಜನೆಯ ಅನುಷ್ಠಾನ ಕುರಿತು ಸಮೀಕ್ಷೆ ಮತ್ತು ಅಧ್ಯಯನ ಮಾಡಲಾಗಿರುತ್ತದೆಯೇ; (ವಿವರ ಒದಗಿಸುವುದು); (Survey and feasibility)

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :**

1) ಒಟ್ಟು 453 ಎಕರೆಗಳು.

2) ಈ ಯೋಜನೆಯ ಭೂ ಸ್ವಾಧೀನ ವೆಚ್ಚ ರೂ.15.00 ಕೋಟಿ ಸದರಿ ಯೋಜನೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಯಾವುದೇ ವೆಚ್ಚವನ್ನು ಮಾಡಿರುವುದಿಲ್ಲ.

3) ಎಸ್.ಎಂ.ಕೃಷ್ಣ ನಗರ ಬಡಾವಣೆಯಲ್ಲಿ ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮಾಡಲು ಸಾರ್ವಜನಿಕರಿಂದ ಅರ್ಜಿಗಳನ್ನು ಕರೆದಿದ್ದು, ಸಾಕಷ್ಟು ಅರ್ಜಿಗಳು ಬಾರದಿದ್ದ ಕಾರಣ ಯೋಜನೆಯನ್ನು ಮಾರ್ಪಡಿಸಿ ಮುಖ್ಯವಾಗಿ ಸರ್ಕಾರದ ವಿವಿಧ

ಇಲಾಖೆಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸ್ವಾಧೀನಪಡಿಸಿಕೊಂಡ ಜಮೀನನ್ನು ಹಂಚಿಕೆ ಮಾಡಲಾಗಿರುತ್ತದೆ.

4) ಹೌದು. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಕರ್ನಾಟಕ) ಲಿ., (IDECK) ಬೆಂಗಳೂರು ಇವರಿಗೆ ವಹಿಸಲಾಗಿತ್ತು. IDECK ಸಂಸ್ಥೆಯವರು ಎಸ್.ಎಂ.ಕೃಷ್ಣ ನಗರದ ಉಪಯುಕ್ತತೆ ಕುರಿತು ಬೇಡಿಕೆಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಎರಡು ಹಂತದಲ್ಲಿ ಭೂಮಿಯನ್ನು ಸ್ವಾಧೀನ ಪಡಿಸಲು ಸೂಚಿಸಿರುತ್ತದೆ. ಪ್ರಾಧಿಕಾರವು ಸದರಿ ಜಮೀನನ್ನು ಎರಡು ಹಂತದಲ್ಲಿ ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಿಲ್ಲವೆಂದು ವರದಿ ಮಾಡಿದ್ದನ್ನು ಪರಿಶೀಲಿಸಿ ಯೋಜನೆಯನ್ನು ಒಂದೇ ಹಂತದಲ್ಲಿ ಕಾರ್ಯಗತಗೊಳಿಸಲು ಯೋಜನೆಗೆ ಅನುಮೋದನೆ ನೀಡಿರುತ್ತದೆ.

**465 (139) ಶ್ರೀ ಶಿವಶಂಕರ್ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) :–** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ಹೊರವಲಯದಲ್ಲಿ 2ನೇ ಹಂತದ ಬೈಪಾಸ್ ರಸ್ತೆ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಕೆ.ಆರ್.ಡಿ.ಸಿ.ಎಲ್.ನಿಂದ ಗೌರಿಬಿದನೂರು ತಾಲ್ಲೂಕು ಹಿರೇಬಿದನೂರು ಒಳ ನದಿಗೆ 1.5 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಿಸಲು ಪ್ರಸ್ತಾವನೆ ಮಂಜೂರಾಗಿದ್ದು ಯಾವ ಹಂತದಲ್ಲಿದೆ;

ಇ) ಹಾಗೆಯೇ ರಸ್ತೆ ನಿರ್ಮಾಣಕ್ಕೂ ಹಣ ಬಿಡುಗಡೆ ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ?

**ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):**

ಅ) ಸದರಿ ಬೈಪಾಸ್ ರಸ್ತೆಗೆ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದುದರಿಂದ ಅನುದಾನದ ಕೊರತೆಯಿಂದಾಗಿ ಇದುವರೆಗೂ ಕಾಮಗಾರಿಯನ್ನು ಕೈಗೊಳ್ಳಲಾಗಿರುವುದಿಲ್ಲ.

ಆ) ಸದರಿ ಸೇತುವೆಯ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.